**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :16 ಸಿಡಬ್ಲು :7

ಸಾಕ್ಷಿಯ ಹೆಸರು : ಶ್ರೀ.ಬೀರಪ್ಪ ಭೀಮಪ್ಪ ಮಾದರ
ತಂದೆಯ ಹೆಸರು : ಶ್ರೀ.ಭೀಮಪ್ಪ ಮಾದರ
ವಯಸ್ಸು : 35 ವರ್ಷ
ಉದ್ಯೋಗ : ವ್ಯವಸಾಯ
ವಾಸ್ತವ್ಯ : ಮುಗಳಖೋಡ
ದಿನಾಂಕ : 19-08-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾ-6 ಪ್ರಾಸಾ-15 ಲಕ್ಷ್ಮಣ ಹಾದಿಮನಿ, ಚಾಸಾಃ 1 ಪ್ರಾಸಾಃ1 ಬಸಪ್ಪ ಮಾದರ ಚಾಸಾಃ 9 ಪ್ರಾಸಾಃ 6 ವಿಮಲವ್ವ ನನಗೆ ಗೊತ್ತಿರುತ್ತಾರೆ. ಅವರು ನಮ್ಮ ಊರಿನವರು. ಪೋಲಿಸರು ನನಗೆ ಪಂಚನಾಮೆ ಮಾಡಲು ಕರೆಸಿರುವುದಿಲ್ಲ. ಈಗ 5-6 ವರ್ಷಗಳ ಹಿಂದೆ ಮಾದರ ಓಣಿಯಲ್ಲಿರುವ ಪಾದಗಟ್ಟಿ ಹತ್ತಿರ ಪೋಲಿಸರು ನನ್ನ ಹೆಬ್ಬಟ್ಟಿನ ಗುರುತನ್ನು ಹಾಕಿಸಿಕೊಂಡಿದ್ದಾರೆ ಮತ್ತು ಪೋಟೋ ತೆಗೆದಿದ್ದಾರೆ.

2. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿದ್ದು, ಅದನ್ನು ಚಾಸಾಃ 9 ವಿಮಲವ್ವ ಅವರ ಮನೆಯಲ್ಲಿ ತೆಗೆಯಲಾಗಿದೆ ಎಂದು ಗುರುತಿಸಿದ್ದಾರೆ. ಅದರಲ್ಲಿ ತಮ್ಮ ಇರುವಿಕೆಯನ್ನು, ಚಾಸಾಃ 9 ವಿಮಲವ್ವ ಹಾಗೂ ಚಾಸಾಃ 6 ಲಕ್ಷ್ಮಣ ಅವರ ಇರುವಿಕೆಯನ್ನು ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ನಿಪಿ-11 ಮತ್ತು ನಿಪಿ-12 ಎಂದು ಗುರುತಿಸಲಾಗಿದೆ. ಆ ಸ್ಥಳದಲ್ಲಿ ಪೋಲಿಸರು ಯಾವುದೇ ವಸ್ತುವನ್ನು ಜಪ್ತು ಮಾಡಿರುವುದಿಲ್ಲ. ಸ್ಥಳದಲ್ಲಿ ಯಾವ ಕಾರಣಕ್ಕೆ

ಪೋಟೋ ತೆಗೆಯಲಾಗಿದೆ ಎಂದು ಪೋಲಿಸರು ನನಗೆ ಹೇಳಿರುವುದಿಲ್ಲ. ನಿಪಿ-10 ರ ಮೇಲೆ ಸಾಕ್ಷಿ ತಮ್ಮ ಹೆಬ್ಬೆಟ್ಟಿನ ಗುರುತನ್ನು ಗುರುತಿಸಿದ್ದಾರೆ. ನಿಪಿ-10 ರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ನನಗೆ ಓದಿ ಹೇಳಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಪಂಚನಾಮೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**<u>ಪಾಟೀ ಸವಾಲು : ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

ಆರೋಪಿತರಿಗೂ, ನಮ್ಮ ಸಮಾಜದವರಿಗೂ ನಮ್ಮೂರಿನಲ್ಲಿರುವ ಖಾಲಿ ಜಾಗದ ವಿಚಾರದಲ್ಲಿ ಜಗಳ ಆದ ವಿಚಾರ ನನಗೆ ಗೊತ್ತಿರುವುದಿಲ್ಲ. ಅದಕ್ಕೆ ಸಂಬಂಧಿಸಿದಂತೆ ಆರೋಪಿತರು ಚಾಸಾಃ 1 ಬಸಪ್ಪ ಅವರ ಮನೆಯ ಮೇಲೆ ಕಲ್ಲು ಬಿಸಾಡಿದ್ದ ವಿಚಾರವಾಗಿ ಪಂಚನಾಮೆ ಮಾಡಲು ಪೋಲಿಸರು ನನ್ನನ್ನು ಸ್ಥಳಕ್ಕೆ ಕರೆಸಿದ್ದರು ಎನ್ನುವುದು ಸರಿಯಲ್ಲ. ಸ್ಥಳದಲ್ಲಿ ಚಾಸಾಃ 1 ಬಸಪ್ಪ ಅವರ ಹೆಂಡತಿ ಚಾಸಾಃ 9 ವಿಮಲವ್ವ ಹಾಜರಿದ್ದು, ಆರೋಪಿತರು ಕಲ್ಲು ಬಿಸಾಡಿದ ಜಾಗ ಎಂದು ತೋರಿಸಿದ್ದು, ಮನೆಯ ಹೆಂಚು ಒಡೆದಿತ್ತು, ಕಲ್ಲುಗಳು ಮನೆಯ ಒಳಗಡೆ ಬಿದ್ದಿದ್ದವು, ಪೋಲಿಸರು ಅದನ್ನು ಜಪ್ತು ಮಾಡಿಕೊಂಡು ನಿಪಿ-10 ರಂತೆ ಪಂಚನಾಮೆಯನ್ನು ಮಾಡಿ ನನಗೆ ಓದಿ ಹೇಳಿ ನಂತರ ನನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿಸಿಕೊಂಡರು ಎನ್ನುವುದು ಸರಿಯಲ್ಲ.

2. ನಿಪಿ-10 ಪಂಚನಾಮೆಯಲ್ಲಿ ಬರೆದಿರುವ ಎಲ್ಲಾ ವಿಚಾರಗಳು ನನಗೆ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ-11 ಮತ್ತು ನಿಪಿ-12 ರಲ್ಲಿರುವ ಪೋಟೋಗಳು ಚಾಸಾಃ 1 ಬಸಪ್ಪ ಅವರ ಮನೆಯಲ್ಲಿ ತೆಗೆಯಲಾದ ಪೋಟೋಗಳು ಎನ್ನುವುದಕ್ಕೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ.

**ಪಾಟೀ ಸವಾಲುಃ1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರಿಂದ ಹಾಗೂ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

ಎಲ್ಲಾ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.